Government of Karnataka

**Karnataka Examinations Authority**

BANGALORE

No. ED/KEA/ADMN/CR- 54/2014-15 Date: 13-06-2016

## CORRIGENDUM NOTIFICATION

### Recruitment for the post of Lecturers in Government Pre-University Colleges in the state of Karnataka

In furtherance to the directions of the Government notification No. ED 35 DGO 2009, Bangalore dated 15-05-2014, Karnataka Examinations Authority Vide notification of even no. dated 08-05-2015 had invited applications for recruitment of **1130** posts of Lecturers in Government Pre-University Colleges in the state of Karnataka through Competitive Examination, as per the provisions laid down in "Karnataka General Services (Pre-University Education) (Recruitment) Rules, 2013".

The selection process was temporarily kept in abeyance as directed by Director, PUE, vide letter from Director, Pre-University Education No. ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 ದಿನಾಂಕ 15-06-2015.

Director, Pre-University Education in his vide letter No. ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 dated 30-04-2016 has informed that Government in their letter No. ಇಡಿ / 161 ಡಿಜಿಡಿ 2015 ದಿನಾಂಕ 05-11-2015 has directed to continue the selection process for 1069 posts excluding Biology, Computer Science and Music lecturer posts and the roster has been modified as per the Government circular No. ಸಿಆಸುಇ 417 ಸೆನೆನಿ 2014 ದಿನಾಂಕ 06-12-2014.

Further, Director, Pre-University Education in the letter No. ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 dated 30-04-2016 has also requested KEA to continue the process of recruitment with necessary modifications.

Accordingly the said **1069** posts of Lecturers revised post wise allotment list has been hosted by KEA on its Website http://kea.kar.nic.in and may be noted by all candidates / concerned for recruitment.

Candidates may please note that all the eligibility conditions, guidelines and procedures mentioned in the earlier notification of even no. dated 08-05-2015 remain unaltered for recruitment of the said posts of PU Lecturers.

**Editing:** To continue the process of recruitment, the editing option will be enabled from 13-06-2016 to 22-06-2016 for all the fields entered by candidates in the online application form. Candidates are required to visit KEA Website for information.

**Examination Places:** The Competitive Examination will be conducted only in **08** selected places but not in all the districts as mentioned in the earlier notification dated 08-05-2015. The examination places are (1) Bangalore, (2) Shimoga, (3) Dharwad, (4) Gulbarga, (5) Mysore, (6) Mangalore, (7) Bijapur and (8) Davangere. As per the earlier notification dated 08-05-2015 the eligible candidates who have selected the examination place other than these places, now they will have to compulsorily select any one of the above specified examination place through online and appear for Competitive Examination. Please visit KEA Website for selection of examination place through online. Selection of examination place through online will be from 13-06-2016 to 22-06-2016.

**Refund of fees:** As per the earlier notification dated 08-05-2015, the candidates who have applied for Biology, Computer Science and Music subjects will have to enter their bank account number and IFSC code by selecting the appropriate link on the KEA Website from 13-06-2016 to 22-06-2016 for refund of fee, as Biology, Computer Science and Music subjects are excluded from the recruitment process as per Government letter No. ಇಡಿ 161 ಡಿಜಿಡಿ 2015 ದಿನಾಂಕ 05-11-2015.

The schedule of dates for the Competitive Examination will be notified.

Sd/-

Executive Director.

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಬೆಂಗಳೂರು

**ಸಂಖ್ಯೆ :** ಇಡಿ/ಕೆಇಎ/ಆಡಳಿತ/ಸಿ.ಆರ್.54/2014-15 **ದಿನಾಂಕ:** 13-06-2016

**ತಿದ್ದುಪಡಿ ಅಧಿಸೂಚನೆ**

**ಕರ್ನಾಟಕದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳ ನೇಮಕಾತಿ**

ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 39 ಡಿಜಿಡಿ 2009, ಬೆಂಗಳೂರು, ದಿನಾಂಕ 15-05-2014 ರ ಹಾಗು "ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು 2013" ರ ಅನ್ವಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ 1130 ಉಪನ್ಯಾಸಕರ ಹುದ್ದೆಗಳ ನೇಮಕಾತಿಯನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ದಿನಾಂಕ 08-05-2015 ರಂದು ಇದೇ ಸಮಸಂಖ್ಯೆಯ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ನಂತರ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಆದೇಶ ಪತ್ರ ಸಂಖ್ಯೆ ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 ದಿನಾಂಕ 15-06-2015 ರ ಅನ್ವಯ ನೇಮಕಾತಿ ಕಾರ್ಯಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು.

ಸರ್ಕಾರವು ತನ್ನ ಪತ್ರ ಸಂಖ್ಯೆ: ಇಡಿ 161 ಡಿಜಿಡಿ 2015 ದಿನಾಂಕ 05-11-2015 ರಲ್ಲಿ ಜೀವಶಾಸ್ತ್ರ, ಗಣಕವಿಜ್ಞಾನ ಮತ್ತು ಸಂಗೀತ ಉಪನ್ಯಾಸಕರ ಹುದ್ದೆಗಳನ್ನು ಹೊರತುಪಡಿಸಿ 1069 ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಲು ನಿರ್ದೇಶನ ನೀಡಿದೆಯೆಂದು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ 30-04-2016ರ ಪತ್ರ ಸಂಖ್ಯೆ ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 ರಲ್ಲಿ ತಿಳಿಸಿರುತ್ತಾರೆ.

ಮುಂದುವರಿದು, ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ದಿನಾಂಕ 30-04-2016 ರ ಪತ್ರ ಸಂಖ್ಯೆ ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 ರಲ್ಲಿ ಹುದ್ದೆಗಳ ಮೀಸಲಾತಿ ಹಂಚಿಕೆಯನ್ನು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 417 ಸೇನೆನಿ 2014 ದಿನಾಂಕ 06-12-2014ರ ಅನ್ವಯ ನಿಯಮಾನುಸಾರ ಪುನರ್ ವಿಂಗಡಣೆ ಮಾಡಿರುವುದಾಗಿ ತಿಳಿಸಿರುತ್ತಾರೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ದಿನಾಂಕ 30-04-2016 ರ ಪತ್ರ ಸಂಖ್ಯೆ ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ.2015-16 ರಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ಮುಂದುವರಿಸಲು ಕೋರಿರುತ್ತಾರೆ.

ಅದರಂತೆ ಸದರಿ ಮಾರ್ಪಡಿಸಿದ ವಿವಿಧ ವಿಷಯಗಳ 1069 ಹುದ್ದೆಗಳ ಹಂಚಿಕೆಯ ವಿವರಗಳನ್ನು ಪ್ರಾಧಿಕಾರವು ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಿದೆ ಹಾಗು ಅಭ್ಯರ್ಥಿಗಳು ಮತ್ತು ಸಂಬಂಧಿಸಿದವರು ಇದನ್ನು ಗಮನಿಸಬಹುದಾಗಿದೆ.

ಸದರಿ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಿನಾಂಕ 08-05-2015 ರ ಇದೇ ಸಮಸಂಖ್ಯೆಯ ಅಧಿಸೂಚನೆಯಲ್ಲಿ ನಿಗದಿ ಪಡಿಸಿರುವ ಎಲ್ಲಾ ಅರ್ಹತೆ, ಸೂಚನೆ ಮತ್ತು ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂಬುದನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬಹುದಾಗಿದೆ.

Editing: ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸುವ ಸಲುವಾಗಿ ಅರ್ಜಿಗಳಲ್ಲಿನ ಮಾಹಿತಿಯನ್ನು ಅರ್ಹತೆಗೆ ಅನುಗುಣವಾಗಿ ಮಾರ್ಪಡಿಸಲು ಅಭ್ಯರ್ಥಿಗಳು ದಿನಾಂಕ 13-06-2016 ರಿಂದ 22-06-2016 ರ ವರೆಗೆ ಅವಕಾಶ ಕಲ್ಪಿಸಲಾಗುವುದು. ಅರ್ಹತೆಗೆ ಅನುಗುಣವಾಗಿ ಅಭ್ಯರ್ಥಿಗಳು ಅರ್ಜಿಯಲ್ಲಿನ ಮಾಹಿತಿಯನ್ನು ಮಾರ್ಪಡಿಸಬಹುದು. ಮಾರ್ಪಡಿಸಿದ ನಂತರ SAVE ಮಾಡುವ ಮಾಹಿತಿಯನ್ನು ಸರ್ಕಾರದ ನಿಯಮದಂತೆ ಮುಂದಿನ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

**ಪರೀಕ್ಷಾ ಕೇಂದ್ರಗಳು:** ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ 08-05-2015 ರ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ ಆದರೆ ಒಟ್ಟು 08 ಕೇಂದ್ರಗಳಲ್ಲಿ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು ಅಂದರೆ, (1) ಬೆಂಗಳೂರು, (2) ಶಿವಮೊಗ್ಗ, (3) ಧಾರವಾಡ, (4) ಗುಲಬರ್ಗ, (5) ಮೈಸೂರು, (6) ಮಂಗಳೂರು, (7) ಬಿಜಾಪುರ ಮತ್ತು (8) ದಾವಣಗೆರೆ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು. ದಿನಾಂಕ 08-05-2015 ರ ಅಧಿಸೂಚನೆಯ ಅನ್ವಯ ಅಭ್ಯರ್ಥಿಗಳು ಈ ಪರೀಕ್ಷಾ ಕೇಂದ್ರಗಳನ್ನು ಹೊರತು ಪಡಿಸಿ ಬೇರೆ ಕೇಂದ್ರಗಳನ್ನು ಆಯ್ಕೆ ಮಾಡಿದ್ದರೆ, ಈಗ ಅಂತಹ ಅಭ್ಯರ್ಥಿಗಳು ಈ ಮೇಲಿನ ಯಾವುದಾದರು ಒಂದು ಪರೀಕ್ಷಾ ಕೇಂದ್ರವನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಆಯ್ಕೆ ಮಾಡಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಲು ಸೂಚಿಸಿದೆ. ಆನ್‌ಲೈನ್ ಮೂಲಕ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಲು ಪ್ರಾಧಿಕಾರದ ವೆಬ್‌ಸೈಟ್‌ಗೆ ಭೇಟಿ ನೀಡಲು ಕೋರಿದೆ. ಅಭ್ಯರ್ಥಿಗಳು ದಿನಾಂಕ 13-06-2016 ರಿಂದ 22-06-2016 ರ ವರೆಗೆ ಆನ್‌ಲೈನ್ ಮೂಲಕ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬಹುದು.

**ಶುಲ್ಕ ಮರುಪಾವತಿ:** ಸರ್ಕಾರವು ತನ್ನ ಪತ್ರ ಸಂಖ್ಯೆ: ಇಡಿ 161 ಡಿಜಿಡಿ 2015 ದಿನಾಂಕ 05-11-2015 ರಲ್ಲಿ ಜೀವಶಾಸ್ತ್ರ, ಗಣಕವಿಜ್ಞಾನ ಮತ್ತು ಸಂಗೀತ ಉಪನ್ಯಾಸಕರ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಹೊರತುಪಡಿಸಿರುವುದರಿಂದ, ದಿನಾಂಕ 08-05-2015 ರ ಅಧಿಸೂಚನೆ ಅನ್ವಯ, ಜೀವಶಾಸ್ತ್ರ, ಗಣಕವಿಜ್ಞಾನ ಮತ್ತು ಸಂಗೀತ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ 13-06-2016 ರಿಂದ 22-06-2016 ರ ವರೆಗೆ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ ತಮ್ಮ ಬ್ಯಾಂಕ್ ಅಕೌಂಟ್ ಸಂಖ್ಯೆ ಮತ್ತು IFSC code ಅನ್ನು ದಾಖಲಿಸಲು ಕೋರಿದೆ ಅಂತಹ ಅಭ್ಯರ್ಥಿಗಳಿಗೆ ಶುಲ್ಕವನ್ನು ಮರುಪಾವತಿ ಮಾಡಲಾಗುವುದು.

ಸ್ಪರ್ಧಾತ್ಮಕ ಪರೀಕ್ಷೆಯ ದಿನಾಂಕಗಳ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು